4	ಶಿವಮೊಗ್ಗ	2949.23	2282.68	5231.91
5	ತುಮಕೂರು	3690.83	3221.63	6912.46
6	ಮೈಸೂರು	4257.97	2917.57	7175.54
7	ಚಿಕ್ಕಮಗಳೂರು	2291.29	1454.42	3745.71
8	ದಕ್ಷಿಣ ಕನ್ನಡ	3225.08	2162.14	5387.22
9	ಹಾಸನ	2738.08	1395.04	4133.12
10	ಕೊಡಗು	1152.38	897.85	2050.23
11	ಮಂಡ್ಯ	2554.46	1555.72	4110.18
12	ಬೆಳಗಾವಿ	4611.40	3361.28	7972.68
13	ಬಿಜಾಪುರ	4228.45	3296.89	7525.34
14	ಧಾರವಾಡ	4143.09	3852.11	7995.20
15	ಉತ್ತರ ಕನ್ನಡ	2089.23	1691.49	3780.72
16	ಗುಲ್ಬರ್ಗಾ	4044.06	3169.62	7213.68
17	ಬಳ್ಳಾರಿ	2883.03	2864.87	5747.90
18	ಬೀದರ್	2200.29	1694.93	3895.22
19	ರಾಯಚೂರು	3502.22	2677.74	6179.96
20	ಬೆಂಗಳೂರು(ನಗರ)	1650.34	1298.52	2948.86
	ಒಟ್ಟು ಜುಮ್ಲಾ	**62000.00**	**48031.37**	**110031.37**

ಗ್ರಾಮೀಣ ಪ್ರದೇಶಗಳ ಅರ್ಹರಿಗೆ ಹಸಿರು ಕಾರ್ಡು ವಿತರಣೆ.

67 - ಶ್ರೀಸಂಗಣ್ಣ ಅಮರಪ್ಪ ಕರಡಿ (ಕೊಪ್ಪಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದ ಅರ್ಹ ಫಲಾನುಭವಿಗಳಿಗೆ ಹಸಿರು ಕಾರ್ಡುಗಳನ್ನು ಸರಿಯಾಗಿ ವಿತರಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅರ್ಹ ಫಲಾನುಭವಿಗಳಿಗೆ ವಿತರಿಸಲು ಸರ್ಕಾರ ಹಾಕಿಕೊಂಡು ಕಾರ್ಯಕ್ರಮಗಳೇನು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಇಲ್ಲಾ

ಅ) ಪ್ರಸಕ್ತ ಈಗ ಗುರುತಿಸಲಾದ ಫಲಾನುಭವಿಗಳಲ್ಲದೆ, ಇನ್ನೂ ಅರ್ಹ ಫಲಾನುಭವಿಗಳು ಬಿಟ್ಟು ಹೋಗಿದ್ದಲ್ಲಿ ಅಂತಹ ಫಲಾನುಭವಿಗಳಿಗೆ, ಈಗ ನೀಡಿರುವ ತ್ರಿವರ್ಣ ಪಡಿತರ ಚೀಟಿಗಳನ್ನು ಮಹಾತ್ಮ ಗಾಂಧೀಜಿಯವರ ಭಾವಚಿತ್ರವಿರುವ ಪಡಿತರ ಚೀಟಿಗಳಿಗೆ ಬದಲಾಯಿಸಿ ಕೊಡುವ ಕಾರ್ಯಕ್ರಮವನ್ನು 1995ನೇ [illegible]ನ್ ತಿಂಗಳಿನಲ್ಲಿ ಹಮ್ಮಿಕೊಂಡಿದ್ದು, ಹಾಗೇ ಬದಲಾಯಿಸಿಕೊಡುವಾಗ ಹಸಿರು ಪಡಿತರ ಚೀಟಿ ಸಿಗಬೇಕಾಗಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ಹಂತ ಹಂತವಾಗಿ ಪಡಿತರ [illegible]ನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ ಹೊಸ ಸಿವಿಲ್ ಕೋರ್ಟ್ ಪ್ರಾರಂಭ

68 - ಶ್ರೀ ಡಾ|| ಯು. ಚಿತ್ರರಂಜನ್ (ಭಟ್ಕಳ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಸಿರಸಿಯಲ್ಲಿ ಈಗಾಗಲೇ ಸಿವಿಲ್ ಕೋರ್ಟ್‌ಗಳಿದ್ದು ಮೂರನೆಯ ಸಿವಿಲ್ ಕೋರ್ಟ್ ಪ್ರಾರಂಭಿಸಲು ಭೌಗೋಳಿಕವಾಗಿಯೂ ಜನ ಸಂಖ್ಯೆಯ ಕೇಸುಗಳ ಸಂಖ್ಯೆಯ ಹಾಗೂ ಈಗಾಗಲೇ ಕಟ್ಟಡ ಲಭ್ಯ ಇರುವ ಆಧಾರಗಳಿರುವ ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ಪ್ರಾರಂಭಿಸಲು ಸರ್ಕಾರ ವಿಳಂಬ ಮಾಡುತ್ತಿರಲು ಕಾರಣಗಳೇನು?

ಆ) ಹಾಗಿದ್ದಲ್ಲಿ ಹೊನ್ನಾವರದಲ್ಲಿ ಯಾವಾಗ ಕೋರ್ಟ್ ಪ್ರಾರಂಭಿಸಲಾಗುವುದು?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಸಿವಿಲ್ ನ್ಯಾಯಾಲಯವನ್ನು ಸ್ಥಾಪಿಸುವ ವಿಷಯವು ಪರಿಶೀಲನೆಯಲ್ಲಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಲಾಗುತ್ತಿದೆ.

ಆ) ಕರ್ನಾಟಕ ಉಚ್ಚ ನ್ಯಾಯಾಲಯ ಈ ಬಗ್ಗೆ ಶಿಫಾರಸ್ಸು ಮಾಡಿದ ನಂತರ, ಹೊನ್ನಾವರದಲ್ಲಿ ಸಿವಿಲ್ ನ್ಯಾಯಾಲಯವನ್ನು ಸ್ಥಾಪಿಸಲು ತ್ವರಿತ ಕ್ರಮ ಕೈಗೊಳ್ಳಲಾಗುವುದು.

ಬೀದರ ಜಿಲ್ಲೆಯ ರಸ್ತೆಗಳ ದುರಸ್ತಿ

69 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ.ರಸ್ತೆ ಬರುತ್ತದೆ. (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಸದರಿ ರಸ್ತೆಗಳಲ್ಲಿ ಬಹುತೇಕ ಎಲ್ಲಾ ರಸ್ತೆಗಳು ಶಿಥಿಲ ಗೊಂಡು ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದನ್ನು ಸರ್ಕಾರದವರು ಗಮನಕ್ಕೆ ಬಂದಿದೆಯೇ?